SN – 007

**3 ನೇ ಸೆಮಿಸ್ಟರ್ ಬಿ.ಎಸ್ಸಿ./ಬಿ.ಸಿ.ಎ. ಪರೀಕ್ಷೆ, ನವೆಂಬರ್/ಡಿಸೆಂಬರ್ 2010**
**(ಫ್ರೆಶರ್ಸ್ ಸ್ಕೀಮ್)**
**ಕನ್ನಡ ಭಾಷಾ ಪತ್ರಿಕೆ - 3**
**ಸಾಹಿತ್ಯ ಸಂವಾದ - ೨**

Time : 3 Hours Max. Marks : 90

**ಭಾಗ - 1**

1. ಅರ್ಥ ಮತ್ತು ಧ್ವನಿ ಬದಲಾಗದಂತೆ ಮೂರು ವಾಕ್ಯಗಳಿಗೆ ಬದಲಿ ವಾಕ್ಯ ರಚಿಸಿ. (3×2=6)

   1) ಅಮೃತನಕ್ಕುಮ್ ನಿನ್ನೀ ಚಿರಂಜೀವಿ.

   2) ಯಾಕೆಂದರೆ ನನಗೂ ನಿನ್ನ ಕೈಯಿಂದ ಕೊಲೆಯಾಗಬೇಕೆಂಬ ಆಸೆ ಇದೆ.

   3) "ನೋಡಿ ಇಲ್ಲೇ ನಿಮ್ಮಿಬ್ಬರಿಗೂ ಬೆನ್ನು ಹುರಿಯ ಕುಣಿಕೆ ತಪ್ಪಿದೆ".

   4) ದೇವರು ತನ್ನ ಭಕ್ತರನ್ನು ತನ್ನ ಬಣ್ಣದಲ್ಲಿ ಸೃಷ್ಟಿಸಿದ್ದಾನೆ ಎಂಬುದರಲ್ಲಿ ನನಗೇನೂ ಸಂದೇಹವಿಲ್ಲ.

2. ಅರ್ಥವತ್ತಾದ ಕ್ರಮದಲ್ಲಿ ಮೂರು ವಾಕ್ಯಗಳನ್ನು ಪುನಾರಚಿಸಿ : (3×2=6)

   1) ಮಾಡ್ತಾರೇನ್ರೋ ಬೆನ್ನು ಉಳುಕಿಗೆಲ್ಲಾ ಔಷಧ ಇಷ್ಟೊಂದು ಹುಚ್ಚುಸೂಳೇ ಮಕ್ಕಳಾ ?

   2) ಹಗುರ ಮಲಗಿದ ನಂಬಿ ಹೆಣ್ಣೆನೆದೆ.

   3) ಯಾರ ವೀಕ್ಷಿಸುವುದು ಜೀವನವನ್ನು ಕಣ್ಣುಗಳಿಂದ ಚಾಪ್ಲಿನ್ ?

   4) ಪೇಳ್ವೆನ್ ಬುದ್ಧಿಗೆ ನನ್ನಲ್ಪ ತೋರ್ಪುದಂ.

3. ಉಪಮೆ ಮತ್ತು ರೂಪಕಗಳನ್ನು ಬಳಸಿ ಮೂರು ಸ್ವಂತ ವಾಕ್ಯಗಳನ್ನು ರಚಿಸಿ : (3×2=6)

   1) ಚಂದ್ರವದನೆ 2) ಆಸೆ ಅಂಕುರ

   3) ಪುಳಿಂದನ ಕಣೆ 4) ಜನಸಾಗರ.

4. ಮೂರು ನುಡಿಗಟ್ಟುಗಳನ್ನು ಸ್ವಂತವಾಕ್ಯದಲ್ಲಿ ಬಳಸಿ : (3×2=6)

   1) ಶೀತಲಸಮರ 2) ಮಣ್ಣು ಮುಕ್ಕು

   3) ಟೊಂಕಕಟ್ಟಿ ನಿಲ್ಲು 4) ಭಯಭಕ್ತಿ

P.T.O.

5. ಎರಡು ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ : **(2×3=6)**

1) ಕಾಯಕವೇ ಕೈಲಾಸ.

2) ಹನಿ ಹನಿಗೂಡಿದರೆ ಹಳ್ಳ ತೆನೆ ತೆನೆಗೂಡಿದರೆ ಬಳ್ಳ.

3) ಆತುರಗಾರನಿಗೆ ಬುದ್ಧಿ ಮಟ್ಟ.

4) ಮಾಡಿದ್ದುಣ್ಣೊ ಮಹಾರಾಯ.

## ಭಾಗ - 2

1. ನಾಲ್ಕು ಪ್ರಶ್ನೆಗಳಿಗೆ ತಾರ್ಕಿಕ ಆಲೋಚನೆಯ ಹಿನ್ನೆಲೆಯಲ್ಲಿ ಉತ್ತರಿಸಿ : **(4×5=20)**

1) ವೆಂಕಪ್ಪನಾಯ್ಡುವಿಗೆ ಬಲರಾಮ ಸಿಕ್ಕಿದ್ದು ಹೇಗೆ? ನಾಯ್ಡುವಿನಿಂದ ಬಲರಾಮ ಪಳಗಿದ್ದು ಹೇಗೆ? ವಿವರಿಸಿ.

2) 'ಸೆಳೆ' ಕವಿತೆಯಲ್ಲಿ ಮೂಡಿಬಂದಿರುವ ಪ್ರಕೃತಿಯ ರಮ್ಯತೆಯನ್ನು ವಿವರಿಸಿ.

3) ಮೊಲ ಮತ್ತು ಕುರಿಯ ದೃಷ್ಟಿ ವಿಧಾನಗಳು ಹೇಗೆ ಭಿನ್ನವಾಗಿವೆ?

4) ಬದುಕಿನಲ್ಲಿ ಕರಿಯನ ರಸಿಕತೆಯನ್ನು ಕುರಿತು ಬರೆಯಿರಿ.

5) ಬ್ರಾಹ್ಮಣನ ಜಾತಿಗರ್ವವನ್ನು ಶ್ರೀರಾಮನು ಭಂಗಗೊಳಿಸಿದ್ದು ಹೇಗೆ?

6) ಆತ್ಮಾಭಿಮಾನ ತೊರೆದವನು ಗುಲಾಮತನವನ್ನು ಗೌರವಿಸುವ ಬಗೆಯನ್ನು ಬಣ್ಣಿಸಿರಿ.

## ಭಾಗ - 3

1. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ : **(2×10=20)**

1) ಚಾಪ್ಲಿನ್‌ನ ಸಿನೀಮಾಗಳ ತಿರುಳುಗಳನ್ನು ಕುರಿತು ಬರೆಯಿರಿ :

2) ವಿಜ್ಞಾನದ ಅಪಾಯಕಾರಿ ಸಂಗತಿಗಳನ್ನು ವಿವರಿಸಿ.

3) ಋಷಿಯ ಶಾಪದ ಹಿನ್ನಲೆಯಲ್ಲಿ 'ಪಾಂಡು–ಮಾದ್ರಿ'ಯರ ದುರಂತವನ್ನು ವಿವರಿಸಿ.

## ಭಾಗ - 4

1. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : **(2×10=20)**

1) ನಾಯ್ಡು ಮತ್ತು ಚಂದ್ರಣ್ಣ ಇವರುಗಳ ವ್ಯಕ್ತಿತ್ವವು ಕಥಾ ನಿರೂಪಣೆಯಲ್ಲಿ ಹೇಗೆ ಮೂಡಿ ಬಂದಿದೆ? ವಿವರಿಸಿ.

2) ಕಿರಗೂರಿನ ಸಾಮಾಜಿಕ ಬದುಕಿನ ಸ್ವರೂಪವನ್ನು ಕಾಳೇಗೌಡ ಹಾಗೂ ಕರಿಯನ ಸಂಭಾಷಣೆಯ ಹಿನ್ನಲೆಯಲ್ಲಿ ವಿವರಿಸಿ.

3) 'ಯಾರಿಲ್ಲಿಗೆ ಬಂದರು ಕಳೆದಿರುಳು' ಕವಿತೆಯಲ್ಲಿ ಬರುವ ಸಾವಿನ ಸೂಚನೆಗಳನ್ನು ಕುರಿತು ಬರೆಯಿರಿ.

---

**III Semester B.Sc./B.C.A. Examination, November/December 2010**
**(Repeaters Scheme)**
**KANNADA LANGUAGE – III**
**ಆಧುನಿಕ ಕನ್ನಡ ಕವಿತೆ ಮತ್ತು ವಿಚಾರಧಾರೆ**

Time : 3 Hours Max. Marks : 90

I. ಅ) ಒಂದರ ಭಾವಾರ್ಥವನ್ನು ಬರೆಯಿರಿ : **(1×5=5)**

1) ಹೀಗೆ ನನಗೆ ಹಬ್ಬವಾಗಿ
ಇನಿಯರಿಬ್ಬರನ್ನು ತೂಗಿ
ಇವಳ ಸೊಬಗನವಳು ತೊಟ್ಟು
ನೋಡ ಬಯಸಿದೆ
ಅವಳ ತೊಡಿಗೆ ಇವಳಿಗಿಟ್ಟು
ಹಾಡ ಬಯಸಿದೆ.

2) ದೇವಮಾನವರೆಲ್ಲ ಮಾರಾಟವಾಗುವರು
ಪಡುವಣದ ಏಳೂರ ಸಂತೆಯಲ್ಲಿ
ಒಂದು ಹೊರೆ ಕಟ್ಟಿಗೆಯೆ ಅಂದು ಸಾಕಾಗಿತ್ತು
ಇಂದು ಇದು ಆತ್ಮಗಳ ಮಾರುಕಟ್ಟೆ.

ಆ) ಮೂರನ್ನು ಸಂದರ್ಭ ಸಹಿತ ವಿವರಿಸಿ : **(3×3=9)**

1) ಹೇಗೆ ಒಪ್ಪಲಿ ಈಗ ಏನೂ ಉಳಿದಿಲ್ಲವೆಂಬ ದೂರು ?
2) ನಾನೇನು ಓದಿದ್ದೆನೋ ಪೆದ್ದ ?
3) ಕಂದ ಕಿವುಡಾಗಿದ್ದಾನೆ ಅಥವಾ ಅವನ ಭಾಷೆಯೇ ಬೇರೋ ?
4) ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು ?
5) ಬದುಕ ಬೂದಿ ಮಾಡುತ್ತಾರೆ.

ಇ) ಮೂರನ್ನು ಕುರಿತು ಟಿಪ್ಪಣಿ ಬರೆಯಿರಿ : **(3×2=6)**

ದಲಿತ ಸಾಹಿತ್ಯ, ಕುವೆಂಪು, ಅರಬ್ಬಿಠಾಕಣ ಸವಾರಿ, ಎಂ.ಆರ್.ಕಮಲ ಸುನೀತ, ಹನುಮದ್ವಿಕಾಸ.

II. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : **(4×5=20)**

1) 'ಗಂಗಾಮಾಯಿ'ಯ ವೈಶಿಷ್ಟ್ಯ.
2) 'ನಾನು, ಹುಡುಗ ಮತ್ತು ಕಾಲ' –ಕವನದ ಆಶಯ.
3) ರತ್ನನ ಕನ್ನಡಾಭಿಮಾನ.

4) ಬಿಸ್ಮಿಲ್ಲರ ಶಹನಾಯಿ ವಾದನ ಕೇಳಿದಾಗಿನ ಕವಿಯ ಅನುಭವ.

5) ಕಟ್ಟಡದ ಕೆಲಸಗಾರರ ದುರಂತ ಬದುಕು.

6) 'ಆ ಹಕ್ಕಿ ಬೇಕಾದರೆ' ಕವನದಲ್ಲಿ ಸ್ವಾರ್ಥದ ಪರಿ ಹಿಗ್ಗುವ ಬಗೆ.

III. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ. **(2×10=20)**

1) 'ಹೊನ್ನ ನೆಕ್ಕಿ ಬಾಳ್ವರಿಲ್ಲ' – ಎಂದು ಬೇಂದ್ರೆ ಏಕೆ ಹೇಳಿದ್ದಾರೆ ? ವಿವರಿಸಿ.

2) ಕೈಗಾರೀಕೀಕರಣ ಕುರಿತು ಶಿಶುನಾಳ ಷರೀಫರ ಪ್ರತಿಕ್ರಿಯೆಯನ್ನು ಪರಿಚಯಿಸಿ.

3) ಶಾಸ್ತ್ರ ಸಂಪ್ರದಾಯಗಳ ಕುರಿತ ಕುವೆಂಪುರವರ ನಿಲುವನ್ನು ವಿಶ್ಲೇಷಿಸಿ.

4) 'ಗಾಂಧೀ ಶತಮಾನೋತ್ಸವ' ಕವಿತೆಯಲ್ಲಿ ಚಿತ್ರಿತವಾಗಿರುವ ಗಾಂಧೀ ನಂತರದ ಭಾರತದ ಸ್ವರೂಪವೆಂತಹದ್ದು ? ವಿವರಿಸಿ.

IV. ಐದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **(5×1=5)**

1) ಮಹಿಳೆಯ ಪರಾವಲಂಬನ ಸ್ಥಿತಿಗೆ ಕಾರಣವೇನು ?

2) ತಲೆ ಹೋಗಿ ಮರ ಉಳಿಯುವುದಾದರೆ ಅದೇ ಹೆಚ್ಚು ಲಾಭದಾಯಕ ಎಂದವರು ಯಾರು ?

3) ಕಲೆಯ ನಿರ್ಮಾಣಕ್ಕೆ ಬೇಕಾದ ಮೂರು ಅಂಶಗಳು ಯಾವುವು ?

4) 'ಮೋಕ್ಷ ಹುಡುಕುತ್ತಾ ಪ್ರೀತಿಯ ಬಂಧನ'– ಲೇಖನದ ಕರ್ತೃ ಯಾರು ?

5) ಎಚ್. ನರಸಿಂಹಯ್ಯನವರ ದೃಷ್ಟಿಯಲ್ಲಿ ಯಾವುದು ದೇವರು ?

6) ಸ್ತ್ರೀ ಶೋಷಣೆಯ ಹೊಸ ಸಾಧ್ಯತೆ ಯಾವುದು ?

7) ಪ್ರಗತಿಪರ ಶಿಕ್ಷಣ ಎಂದರೇನು ?

V. ಒಂದು ವಿಷಯದ ಬಗ್ಗೆ ವಿವರಣಾತ್ಮಕ ಟಿಪ್ಪಣಿ ಬರೆಯಿರಿ : **(1×5=5)**

1) ವ್ಯಕ್ತಿ ಗೌರವದ ಗುಣಗಳಾವುವು ?

2) ಜರ್ಮನ್ ಗ್ರಿಯರ್ ಸೂಚಿಸುವ ಲಿಂಗ ತಾರತಮ್ಯದ ಕಾರಣಗಳು.

VI. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ. **(2×10=20)**

1) ಬುದ್ಧನ ವ್ಯಕ್ತಿತ್ವದ ಬಗ್ಗೆ ಲಂಕೇಶರ ಅಭಿಪ್ರಾಯವೇನು ? ವಿವರಿಸಿ.

2) 'ಕಲೆ'ಯನ್ನು ಕುರಿತು ಶಿವರಾಮ ಕಾರಂತರ ಚಿಂತನೆಯನ್ನು ಪರಿಚಯಿಸಿ.

3) ನೇಮಿ ಚಂದ್ರರ 'ಮಹಿಳೆ ಮತ್ತು ವಿಜ್ಞಾನ' ಲೇಖನವು ಸ್ತ್ರೀಪರ ಚಿಂತನೆಗಳಿಂದ ಕೂಡಿದೆ – ಸಮರ್ಥಿಸಿ.

4) 'ಪ್ರಕೃತಿಯೊಂದಿಗೆ ಮಾನವನ ಸಂಬಂಧ ತಾಯಿ ಮಗುವಿನ ಸಂಬಂಧದಂತೆ ಇರಬೇಕು' – ಈ ಹೇಳಿಕೆಯನ್ನು 'ಪರಿಸರ ಮತ್ತು ವಿಕಾಸ' ಲೇಖನದ ಆಧಾರದಿಂದ ಉತ್ತರಿಸಿ.